<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.474/2018. P.W.-2.**

ದಿನಾಂಕ:**02.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಯು ಎಸ್ ವಕೀಲರಿಂದ:-

ವೇದಮೂರ್ತಿ ನನ್ನ ದೊಡ್ಡಪ್ಪನ ಮಗ. ವೇದಮೂರ್ತಿ ರವರು ಓ ಎಸ್ 473/18 ರಂತೆ ದಾವೆ ಹೂಡಿದ್ದಾರೆ ಎಂದರೆ ಸರಿ. ನಾನು 6 ನೇ ತರಗತಿ ಓದಿರುತ್ತೇನೆ. ನಮಗೆ ಪಿತ್ರಾರ್ಜಿತ ಜಮೀನು ಇದ್ದು, ಅದು ಬೆಲಗೂರಿನಲ್ಲಿ ಇದೆ. ಬೆಲಗೂರಿನಲ್ಲಿ ನನ್ನ ತಂದೆ ಜಮೀನನ್ನು ಖರೀದಿ ಮಾಡಿರುತ್ತಾರೆ. ನನ್ನ ತಂದೆ ಖರೀದಿಸಿದ ಹಾಗೂ ಪಿತ್ರಾರ್ಜಿತ ಜಮೀನುಗಳ ಖಾತೆ ಈಗ ನನ್ನ ತಂದೆಯ ಹೆಸರಿನಲ್ಲಿ ಇದೆ. ನನ್ನ ತಂದೆಗೆ 4 ಜನ ಮಕ್ಕಳು ಅವರುಗಳೆಂದರೆ ನಾನು, ನಾಗರತ್ನಮ್ಮ, ಸುಜಾತ, ಭಾಗ್ಯ. ಬೆಲಗೂರಿನಲ್ಲಿನ ನಮ್ಮ ಜಮೀನಿನ ಸರ್ವೆ ನಂ.288/2 ಬಿ ಎಂದರೆ ಸರಿ. ಇದನ್ನು ನನ್ನ ತಂದೆ ಕ್ರಯಕ್ಕೆ ಖರೀದಿಸಿದ್ದು ಎಂದರೆ ಸಾಕ್ಷಿಯು ನಾನು ಖರೀದಿಸಿ ನನ್ನ ತಂದೆಯ ಹೆಸರಿಗೆ ಖಾತೆ ಮಾಡಿಸಿರುತ್ತೇನೆ. ಅದೇ ರೀತಿ ಬೆಲಗೂರಿನ ಸರ್ವೆ ನಂ.106 ರಲ್ಲಿಯೂ ಸಹ: ಜಮೀನು ಖರೀದಿಸಿರುತ್ತೇವೆ. ಇದಲ್ಲದೇ ಬೇರೆ ಜಮೀನು ಖರೀದಿ ಮಾಡಿರುವುದಿಲ್ಲ. ಯಾವ ವರ್ಷದಲ್ಲಿ ಖರೀದಿಸಿದೆವು ಎಂದು ಈಗ ನೆನಪಿಲ್ಲ. ಖರೀದಿಸಿದ ತಕ್ಷಣ ನಮ್ಮ ಹೆಸರಿಗೆ ಖಾತೆ ಬದಲಾವಣೆ ಆಯಿತು ಎಂದರೆ ಸರಿ.

ದಾವಾ ಸ್ವತ್ತಾದ ಸರ್ವೆ ನಂ.25 ಮೂಲತ: ಗಂಗಾಧರಯ್ಯ ಗೆ ಸೇರಿದ್ದಾಗಿರುತ್ತದೆ. ಸದರಿ ಸ್ವತ್ತಿನ ಖಾತೆ ಗಂಗಾಧಾರಯ್ಯ ರವರ ಹೆಸರಿಗೆ ಇರುವುದಿಲ್ಲ. ಗಂಗಾಧರಯ್ಯ ರವರ ಹೆಸರಿಗೆ ಖಾತೆ ಮಾಡಿಕೊಡಿ ಎಂದು ಅರ್ಜಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ಪುಟ್ಟಯ್ಯ ಎಂಬ ಅರ್ಜಿ ನೀಡಿದ್ದೆವು. ಸದರಿ ಅರ್ಜಿ ಏನು ಆಯಿತು ಎಂದು ಮತ್ತೆ ವಿಚಾರಣೆ ಮಾಡಿರುವುದಿಲ್ಲ ನಾವು ಖಾತೆ ಆಗಿರುತ್ತದೆ ಎಂದು ಸುಮ್ಮನಾಗಿರುತ್ತೇವೆ. ಸದರಿ ಅರ್ಜಿಯನ್ನು ನೀಡಿದ ದಿನಾಂಕ, ಇಸವಿ ಗೊತ್ತಿಲ್ಲ, ಸುಮಾರು 20 – 25 ವರ್ಷ ಗಳ ಹಿಂದೆ ಕೊಟ್ಟಿರುತ್ತೇವೆ.

ನಾನು ಸರ್ಕಾರದಿಂದ ಕೃಷಿಕರಿಗೆ ನೀಡುವ ಸೌಲಭ್ಯಗಳನ್ನು ದಾವಾ ಸ್ವತ್ತಿನ ಮೇಲೆ ಪಡೆದಿರುವುದಿಲ್ಲ. ಬೆಲಗೂರಿನ ಜಮೀನಿನ ಮೇಲೆ ಪಡೆದಿರುತ್ತೇನೆ. ನಾನು ಕೃಷಿ ಸಾಲ ಪಡೆದಿರುತ್ತೇನೆ. ಕೃಷಿ ಸಾಲ ಪಡೆಯುವಾಗ ಏನೆನೂ ದಾಖಲೆ ಕೊಡಬೇಕು ಎಂದು ನನಗೆ

ಗೊತ್ತಿಲ್ಲ, ಅವರು ಯಾವ ದಾಖಲೆ ಕೇಳಿದ್ದರು ಅವುಗಳನ್ನು ಕೊಟ್ಟಿರುತ್ತೇನೆ. ದಾವಾ ಸ್ವತ್ತಿನ ಮೇಲೆ ನಾನು ಸಾಲ ಪಡೆದಿಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಕ್ರಯದ ಮೂಲಕ ಬಂದಿರುತ್ತದೆ. ದಿ:20.10.1965 ರಲ್ಲಿ 1 ಎಕರೆ20 ಗುಂಟೆ ಹಾಗೂ ದಿ:16.01.1966 ರಲ್ಲಿ ಮತ್ತೆ 1 ಎಕರೆ 20 ಗುಂಟೆಯನ್ನು ಹಾಗೂ 29.09.1967 ರಲ್ಲಿ 1 ಎಕರೆ ಜಮೀನನ್ನು ಹಾಗೂ ದಿ:22.05.1972 ರಲ್ಲಿ ಮತ್ತೆ 20 ಗುಂಟೆ ಜಮೀನು ಖರೀದಿಸಿರುತ್ತೇವೆ. ಸದರಿ ಸ್ವತ್ತುಗಳನ್ನು ಹಾಲಯ್ಯ ಬಿನ್ ಮುಪ್ಪನಯ್ಯ ರವರಿಂದ ಖರೀದಿಸಿರುತ್ತೇವೆ. ಖರೀದಿಸುವಾಗ ನಾನು ಹಾಜರು ಇರಲಿಲ್ಲ, ಆಗ ನಾನು ಚಿಕ್ಕವನು. ಈ ಖರೀದಿ ಪತ್ರಗಳಿಗೆ ಯಾರು ಯಾರು ಸಹಿ ಮಾಡಿದ್ದರು ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಮುಪ್ಪನಯ್ಯ ನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಹಾಲಯ್ಯ ಮತ್ತೆ ಇನ್ನೊಬ್ಬರ ಹೆಸರು ಈಗ ನೆನಪಿಲ್ಲ. ಮುಪ್ಪನಯ್ಯ ರವರ ಮಕ್ಕಳ ನಡುವೆ ಆಸ್ತಿ ವಿಭಾಗವಾಗಿತ್ತು. ಅವರುಗಳ ನಡುವೆ ಆಸ್ತಿ ವಿಭಾಗವಾದ ನಿಖರ ವರ್ಷ ಗೊತ್ತಿಲ್ಲ ಆದರೆ 1930 ಕ್ಕಿಂತ ಮುಂಚೆ ಆಗಿರುತ್ತದೆ. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ.

ದಾವಾ ಸ್ವತ್ತಿನ ಖಾತೆ ನಾವು ಖರೀದಿ ಮಾಡುವಾಗ ಯಾರ ಹೆಸರಿನಲ್ಲಿ ಇತ್ತು ಎಂದರೆ ಮುಪ್ಪನಯ್ಯನ ಹೆಸರಿಗೆ ಇತ್ತು. ಮುಪ್ಪನಯ್ಯ ಕ್ರಯಪತ್ರಕ್ಕೆ ಸಹಿ ಮಾಡಿರುವುದಿಲ್ಲ, ಅವರು ಆಗ ಬದುಕಿರಲಿಲ್ಲ. ಮುಪ್ಪನಯ್ಯ ಮೃತಪಟ್ಟ ದಿನಾಂಕ ಗೊತ್ತಿಲ್ಲ. ಮುಪ್ಪನಯ್ಯ ರವರು 1979 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಾಲಯ್ಯ ನನಗೆ ಯಾವುದೇ ಜಮೀನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

1967 ರಲ್ಲಿ ಖರೀದಿಸಿದ್ದೇವೆ ಎಂದು ಹೇಳಿದ ಕ್ರಯಪತ್ರದಲ್ಲಿ ನಮೂದು ಮಾಡಿರುವ ಸ್ವತ್ತಿನ ಚೆಕ್ಕುಬಂಧಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿಯು ಖರೀದಿಸಿದ ಎಲ್ಲಾ ಸ್ವತ್ತುಗಳನ್ನು ಸೇರಿಸಿಕೊಂಡು ಚೆಕ್ಕುಬಂಧಿ ನನಗೆ ಗೊತ್ತಾಗುತ್ತದೆ, ಒಂದೊಂದು ಸ್ವತ್ತುಗಳ ಚೆಕ್ಕುಬಂಧಿ ಹೇಳಲು ಸಾದ್ಯವಾಗುವುದಿಲ್ಲ. 1965 ರಲ್ಲಿ ಖರೀದಿಸಿದ ಕ್ರಯಪತ್ರದಲ್ಲಿ ನಮೂದು ಇರುವ ಚೆಕ್ಕುಬಂಧಿ ಪೂರ್ವಕ್ಕೆ ಹಾಲಯ್ಯ - ಕುಮಾರ ರವರ ಜಮೀನು, ಉತ್ತರಕ್ಕೆ ಈಶರಪ್ಪ ರವರ ಜಮೀನು, ಪಶ್ಚಿಮಕ್ಕೆ ನಿಂಗಪ್ಪ ರವರ ಜಮೀನು, ದಕ್ಷಿಣಕ್ಕೆ ನಮ್ಮದೇ ಜಮೀನು ಇರುತ್ತದೆ.

1966 ರಲ್ಲಿ ಖರೀದಿಸಿದ ಕ್ರಯಪತ್ರದಲ್ಲಿ ನಮೂದು ಇರುವ ಚೆಕ್ಕುಬಂಧಿ

ಪೂರ್ವಕ್ಕೆ ನಿಂಗಪ್ಪ ರವರ ಜಮೀನು, ಉತ್ತರಕ್ಕೆ ನಮ್ಮದೇ ಜಮೀನು, ಪಶ್ಚಿಮಕ್ಕೆ ಸಿದ್ದರಾಮಪ್ಪ ನಿಂಗಪ್ಪ ರವರ ಜಮೀನು, ದಕ್ಷಿಣಕ್ಕೆ ಚಂದ್ರಪ್ಪ ರವರ ಜಮೀನು ಇರುತ್ತದೆ. 1975 ರಲ್ಲಿ ಖರೀದಿಸಿದ ಕ್ರಯಪತ್ರದಲ್ಲಿ ನಮೂದು ಇರುವ ಚೆಕ್ಕುಬಂಧಿ ಉತ್ತರಕ್ಕೆ ಮತ್ತು ಪೂರ್ವಕ್ಕೆ ನಮ್ಮದೇ ಜಮೀನು, ದಕ್ಷಿಣಮತ್ತು ಪಶ್ಚಿಮಕ್ಕೆ ಸಿದ್ದರಾಮಪ್ಪ ರವರ ಜಮೀನು ಇರುತ್ತದೆ. ವಾದ ಪತ್ರದಲ್ಲಿ ಕಾಣಿಸಿರುವ ಚೆಕ್ಕು ಬಂಧಿ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಈಗ ಮೇಲೆ ಹೇಳಿದ ಚೆಕ್ಕುಬಂಧಿಯನ್ನು ಬರೆಸಿರುತ್ತೇನೆ. ನಾನು ಮೇಲೆ ಹೇಳಿದ 4 ಸ್ವತ್ತುಗಳ ಚೆಕ್ಕುಬಂಧಿ ಹೊಂದಿರುವ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಈಗ ಹೇಳಿದ ಚೆಕ್ಕುಬಂಧಿಯ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಸ್ವತ್ತುಗಳ ಬಾಬ್ತು ಕಂದಾಯ ಪಾವತಿಸಿರುತ್ತೇನೆ. ನಾವು ಖರೀದಿಸಿದಾಗಿನಿಂದಲೂ ಕಂದಾಯ ಪಾವತಿಸುತ್ತಾ ಬರುತ್ತಿದ್ದೇವೆ. ಆ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ದಾವೆಯಲ್ಲಿ ನನ್ನ ಅಕ್ಕ-ತಂಗಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲವೆಂದರೆ ಸರಿ. ನಮ್ಮ ಊರಿಗೂ ದಾವಾ ಸ್ವತ್ತಿಗೂ 3 ½ ಕಿ ಮೀ ಆಗುತ್ತದೆ. 8 ಕಿ ಮೀ ಅಂತರವಿದೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲದಲ್ಲಿ ದಾವಾ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದರೆ ಮುಪ್ಪನಯ್ಯ ರವರ ಹೆಸರಿನಲ್ಲಿ ಇತ್ತು. ಈ ದಾವೆ ಸಲ್ಲಿಸುವ ಮುಂಚೆ ನಾನು ತಾಲ್ಲೂಕು ಕಛೇರಿಗೆ ಖಾತೆ ಬದಲಾವಣೆ ಮಾಡಿಕೊಡಿ ಎಂದು ಅರ್ಜಿ ನೀಡಿರುವುದಿಲ್ಲ. ದಾವಾ ಸ್ವತ್ತು ನಮ್ಮದ್ದಲ್ಲದ ಕಾರಣದಿಂದಲೇ ನಾನು ಯಾವುದೇ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.